ಸ್ಥಾಪನೆ : 1966
ನೋಂದಣಿ ಸಂಖ್ಯೆ ಡಿ.ವೈ.ಆರ್. 443

ಪ್ರಧಾನ ಕಛೇರಿ : 23151204, 23152073
ಬಸವೇಶ್ವರನಗರ ಶಾಖೆ : 23231238, 23232587
ಅನ್ನಪೂರ್ಣೇಶ್ವರಿನಗರ ಶಾಖೆ : 23183734
ಪೀಣ್ಯ.ಟಿ.ದಾ.ವಿಸ್ತರಣಾ ಶಾಖೆ : 28374844
Email: rcbank.ltd@gmail.com

# ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ.741, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.

## ಸಭೆಯ ಸೂಚನೆ

ದಿನಾಂಕ 31-03-2019ಕ್ಕೆ ಮುಕ್ತಾಯಗೊಂಡ ಬ್ಯಾಂಕಿನ(2018-19ನೇ ಸಾಲಿನ) 52ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 22-09-2019 ರಂದು ಭಾನುವಾರ ಬೆಳಿಗ್ಗೆ 9-30 ಘಂಟೆಗೆ ಬ್ಯಾಂಕಿನ ಗೌರವ ಅಧ್ಯಕ್ಷರಾದ ಶ್ರೀ. ಕೆ.ಎಲ್. ತಿಮ್ಮಪ್ಪ ಇವರ ಅಧ್ಯಕ್ಷತೆಯಲ್ಲಿ "ಶ್ರೀ ರಾಜರಾಜೇಶ್ವರಿ ಕಲ್ಯಾಣ ಮಂಟಪ" ಡಾ:ರಾಜ್‌ಕುಮಾರ್ ರಸ್ತೆ, 2ನೇ ವಿಭಾಗ, ರಾಜಾಜಿನಗರ, ಬೆಂಗಳೂರು-560010 ಇಲ್ಲಿ ನಡೆಸಲಾಗುವುದು. ಸದಸ್ಯರು ಅನುವು ಮಾಡಿಕೊಂಡು ಸಭೆಗೆ ಸಕಾಲಕ್ಕೆ ಆಗಮಿಸಬೇಕೆಂದು ಕೋರಲಾಗಿದೆ.

## ಕಾರ್ಯಕ್ರಮಗಳು

1. ಪ್ರಾರ್ಥನೆ
2. ಅಧ್ಯಕ್ಷರಿಂದ ಸ್ವಾಗತ ಭಾಷಣ
3. ಚಿರಸ್ಮರಣೆ.
4. ಸರ್ವಸದಸ್ಯರ ಸಭೆಯ ಮೀಟಿಂಗ್ ನೋಟಿಸನ್ನು ಓದುವುದು.
5. 2017-18ನೇ ಸಾಲಿನ ಸರ್ವಸದಸ್ಯರ ಸಭೆಯ ನಡೆವಳಿಗಳನ್ನು ಓದಿ ದಾಖಲು ಮಾಡುವುದು.
6. 2018-19ನೇ ಸಾಲಿನ ಕಾರ್ಯಕಾರಿ ಸಮಿತಿಯ ವಾರ್ಷಿಕ ವರದಿಯ ಅಂಗೀಕಾರ
7. 2018-19ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿಯ ಅಂಗೀಕಾರ.
8. 2018-19ನೇ ಸಾಲಿನ ನಿವ್ವಳ ಲಾಭದ ಹಂಚಿಕೆ .
9. 2018-19ರ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಿಗೆ ಖರ್ಚಾಗಿರುವುದನ್ನು ಅನುಮೋದಿಸುವ ಮತ್ತು 2019-20ನೇ ಸಾಲಿನ ಅಂದಾಜು ಆಯ-ವ್ಯಯಗಳ ಅಂಗೀಕಾರ.
10. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶಕರು ಪಟ್ಟಿ ಮಾಡಿರುವ ಪೈಕಿ 2019-20ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುವ ಬಗ್ಗೆ
11. ಸದಸ್ಯರುಗಳಿಂದ ಬಂದ ವಿಷಯಗಳ ಪರಿಶೀಲನೆ.
12. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬೇಕಾದ ಇತರೆ ವಿಷಯಗಳು.
13. ವಂದನಾರ್ಪಣೆ

ಕಾರ್ಯಕಾರಿ ಮಂಡಳಿ ಆಜ್ಞೆಯಮೇರೆಗೆ
ಸಹಿ/-
(ಆರ್.ಗೋವಿಂದರಾಜು)
ವ್ಯವಸ್ಥಾಪಕರು

ಬೆಂಗಳೂರು-560010
ದಿನಾಂಕ : 05-09-2019

# ವಿಶೇಷ ಸೂಚನೆ

1). ಸದಸ್ಯರು ವಾರ್ಷಿಕ ವರದಿ ಪುಸ್ತಕವನ್ನು ದಿನಾಂಕ 17-09-2019 ರಿಂದ ಬ್ಯಾಂಕಿನ ಕೆಲಸದ ವೇಳೆಯಲ್ಲಿ ಪಡೆಯಬಹುದು.

2). ವಿಷಯ 11ಕ್ಕೆ ಸಂಬಂಧಿಸಿದಂತೆ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಲು ಇಚ್ಛೆಯುಳ್ಳ ಸದಸ್ಯರು ದಿನಾಂಕ 19-09-2019 ರ ಒಳಗೆ ಚರ್ಚಿಸಬೇಕಾದ ವಿಷಯದ ಬಗ್ಗೆ ಲಿಖಿತ ಪತ್ರವನ್ನು ವ್ಯವಸ್ಥಾಪಕರಿಗೆ ಸಲ್ಲಿಸಬಹುದಾಗಿದೆ.

3). ಸದಸ್ಯರೆಲ್ಲರೂ ಬ್ಯಾಂಕಿನಿಂದ ಪಡೆದಿರುವ ತಮ್ಮ ಗುರುತಿನ ಚೀಟಿಯನ್ನು ತಪ್ಪದೇ ತರಬೇಕಾಗಿ ವಿನಂತಿ.

4). ಇದುವರೆವಿಗೂ ತಮ್ಮ ಗುರುತಿನ ಚೀಟಿಯನ್ನು ಪಡೆಯದೆ ಇರುವ ಸದಸ್ಯರು ಕೂಡಲೇ ತಮ್ಮ 2 ಪಾಸ್‌ಪೋರ್ಟ್ ಭಾವಚಿತ್ರವನ್ನು ಸಲ್ಲಿಸಿ, ಗುರುತಿನ ಚೀಟಿಯನ್ನು ಪಡೆಯುವುದು.

5). ಷೇರು ಪ್ರಮಾಣ ಪತ್ರ ಪಡೆಯದೇ ಇರುವ ಸದಸ್ಯರು ಕೂಡಲೇ ಕಛೇರಿಗೆ ಬಂದು ಪಡೆಯಲು ಕೋರಿದೆ.

6). ಸದಸ್ಯರುಗಳು ತಮ್ಮ ಖಾತೆಗಳಿಗೆ ನಾಮ ನಿರ್ದೇಶನ ಮಾಡದೇ ಇದ್ದ ಪಕ್ಷದಲ್ಲಿ ಕೂಡಲೇ ಬಂದು ನಾಮಿನೇಷನ್ ಫಾರಂ ಸಲ್ಲಿಸಲು ಸೂಚಿಸಿದೆ.

7). ಸದಸ್ಯರು ತಮ್ಮ ಇ-ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ಕೂಡಲೇ ಬ್ಯಾಂಕಿಗೆ ನೀಡಿ ನೋಂದಾಯಿಸಿಕೊಳ್ಳತಕ್ಕದ್ದು ಹಾಗೂ ಸದಸ್ಯರ ಮನೆ ವಿಳಾಸ, ದೂರವಾಣಿ ಮತ್ತು ಮೊಬೈಲ್ ಸಂಖ್ಯೆ ಬದಲಾವಣೆಯಾಗಿದ್ದಲ್ಲಿ ಬ್ಯಾಂಕಿಗೆ ಬಂದು ನೀಡುವುದು.

8) ಬ್ಯಾಂಕಿನ ಬೈಲಾ ಸಂಖ್ಯೆ 20ರ ಪ್ರಕಾರ **ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು :**

1. ಬ್ಯಾಂಕು ಒದಗಿಸುವಂತೆ ಪ್ರತಿ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳ ಅಥವಾ ಸೌಲಭ್ಯಗಳ ಪ್ರಮಾಣವು ಕೆಳಗಿನಂತಿರತಕ್ಕದ್ದು

   i) ಸದಸ್ಯನು ಹೊಂದಿರತಕ್ಕ ಕನಿಷ್ಠ ಷೇರು ಬಂಡವಾಳವು ಒಂದು ಸಾವಿರ ರೂಪಾಯಿಗಳು

   ii) ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ಎರಡು ಸಾವಿರದ ಐದು ನೂರು ರೂಪಾಯಿಗಳು ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ, ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ

   iii) ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು ಇಪ್ಪತ್ತು ಇರತಕ್ಕದ್ದು.

2. ಮೇಲೆ ತಿಳಿಸಿದ ಠೇವಣಿಯು ಸದಸ್ಯನು ವರ್ಷವಿಡೀ ಬ್ಯಾಂಕಿನಲ್ಲಿ ತೊಡಗಿಸಿದ ಎಲ್ಲಾ ತರಹದ ಠೇವಣಿ (ತಗಾದೆ ಮತ್ತು ಅವಧಿ) ಗಳನ್ನು ಒಳಗೊಂಡ ಒಟ್ಟು ಮೊತ್ತ ಆಗಿರತಕ್ಕದ್ದು.
3. ರಿಸರ್ವ್ ಬ್ಯಾಂಕು ನೀಡಿರುವ 'ನಮ್ಮ ಗ್ರಾಹಕನನ್ನು ತಿಳಿಯಿರಿ (ಕೆ.ವೈ.ಸಿ)' ನಿರ್ದೇಶನವು ಬ್ಯಾಂಕಿನ ಪ್ರತಿ ಸದಸ್ಯನಿಗೆ ಅನ್ವಯವಾಗತಕ್ಕದ್ದು.
4. ಸಾಲದ ಮೊತ್ತವು ಬ್ಯಾಂಕು ಮಂಜೂರು ಮಾಡಿ ಸದಸ್ಯನು ಉಪಯೋಗಿಸಿಕೊಂಡ ಸಾಲದ ಮಿತಿಯಾಗಿರತಕ್ಕದ್ದು. ಇದು ಇಡೀ ಸಾಲದ ಅವಧಿಗೆ ಅನ್ವಯವಾಗತಕ್ಕದ್ದು.

9) ಬ್ಯಾಂಕಿನ ಬೈಲಾ ಸಂಖ್ಯೆ 47ರನ್ವಯ ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ/ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ.

ಎ). ಯಾವುದೇ ಒಬ್ಬ ಸಹಸದಸ್ಯ ಮತ್ತು ಒಬ್ಬ ನಾಮಮಾತ್ರ ಸದಸ್ಯ

ಬಿ). ಬ್ಯಾಂಕಿನಿಂದ ಸಾಲ ಪಡೆದು ಸುಸ್ತಿಬಾಕಿದಾರನಾದ ಸದಸ್ಯ

ಸಿ). ಕಾಯ್ದೆಯ ಕಲಂ 16(1) (ಡಿ), (ಇ), (ಎಫ್) ಮತ್ತು (ಜಿ) ಪ್ರಕಾರ ಸದಸ್ಯನಾಗಿ ಪ್ರವೇಶ ಪಡೆದ ಸುಸ್ತಿದಾರ

ಡಿ). ಅಂಥ ಸಭೆಯ/ಚುನಾವಣೆಯ ದಿನಾಂಕಕ್ಕೆ ಮುಂಚಿತವಾದ ಹನ್ನೆರಡು ತಿಂಗಳೊಳಗೆ ಬ್ಯಾಂಕಿನ ಸದಸ್ಯನಾದ ವ್ಯಕ್ತಿ

ಇ). ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಒಬ್ಬ ಸದಸ್ಯ

ಎಫ್).ಮೂರು ನಿರಂತರ ಸಹಕಾರ ವರ್ಷಗಳಿಗೆ ಬ್ಯಾಂಕಿನ ಉಪವಿಧಿಗಳಲ್ಲಿ ಪ್ರತಿ ವರ್ಷದಲ್ಲಿ ಒಬ್ಬ ಸದಸ್ಯನು ಬಳಸಿಕೊಳ್ಳಲು ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಒಬ್ಬ ಸದಸ್ಯ

10 ಸಭೆಗೆ ಸದಸ್ಯರಿಗೆ ಮಾತ್ರ ಪ್ರವೇಶ.1

11 ಸದಸ್ಯರುಗಳಿಗೆ ಲಘು ಉಪಹಾರ ವ್ಯವಸ್ಥೆ ಮಾಡಲಾಗಿದೆ.